Sri N. RACHAIAH.—We will examine this.

ಶ್ರೀ ಜಿ. ಶಿವಪ್ಪ.—ಈ ಟ್ರಾಕ್ಟರುಗಳನ್ನು ಹೈರ್ ಪರ್ಚೇಸ್ (Hire-Purchase) ಸಿಸ್ಟಂ ಮೇಲೆ ತೆಗೆದುಕೊಳ್ಳುವ ವಿಷಯಂದು ಹೆಚ್ಚಾಗಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ರಾಚಯ್ಯ.—ಬಂದಿದೆ. ಆರೀತಿಯಾಗಿಯೇ ನಾವು ಕನ್‌ಸಿಡರ್ ಮಾಡುತ್ತೇವೆ.

Sri G. SIVAPPA.—It is a question of availability of foreign exchange for the purchase of tractors and it is the responsibility of the State Government to see that necessary foreign exchange is provided.

Sri N. RACHAIAH.—I assure the Hon'ble Member that we will take suitable action.

GRANT OF LAND TO SCHEDULED CASTES PEOPLE IN KADUR TALUK.

*Q.—377. Sri H. S. RUDRAPPA (Birur).—

Will the Government be pleased to state :—

(*a*) the extant or acreage of land under Revenue Department suitable for cultivation in Kadur Taluk ;

(*b*) the number of acres given to scheduled castes people for cultivation from last three years in the said Taluk (Hobli-wise information may be furnished) ;

(*c*) the number of applications received from Co-operative Farming Societies for granting land in the above Taluk ;

(*d*) whether Government have granted any lands to the Farming Societies and if not, the reasons for the delay ;

*A.—Sri KADIDAL MANJAPPA (Minister for Revenue).—

(*a*) 6,588 Acres and 1 Gunta.

(*b*)

			Acres	*Guntas*
1	Kasaba	...	236	01
2	Birur	...	1,181	04
3	Hirenallur	...	696	30
4	Yagaty	...	564	14
5	Sakarapatna	...	1,466	25
6	Singatagere	...	477	18
	Total	...	4,622	12

(*c*) Four.

(*d*) Lands have been granted to only one society. Regarding the three other societies one of them is not yet registered. The members of one society do not belong to Kadur Taluk and the question of grant of land to the fourth is still under consideration.

ಶ್ರೀ ಡಿ. ಹೆಚ್. ರುದ್ರಪ್ಪ.—(ಡಿ)ಗೆ ಉತ್ತರವಾಗಿ ಒಂದು ಸೊಸೈಟಿಗೆ ಮಾತ್ರ ಜಮೀನನ್ನು ಕೊಡಲಾಗಿದೆ. ಅದು ಯಾವುದು ಮತ್ತು ಉಳಿದ ಸೊಸೈಟಿಗಳು ಯಾವುವು ?

†ಶ್ರೀ ಕಡಿದಾಳ್ ಮಂಜಪ್ಪ.—ಲಕ್ಷ್ಮೀಪುರ ಫಾರ್ಮಿಂಗ್ ಕೋ-ಆಪರೇಟಿವ್ ಸೊಸೈಟಿಗಾಗಿ ಈಗಾಗಲೇ 150 ಎಕರೆಗಳಷ್ಟು ಕೊಡಲಾಗಿದೆ.

ಶ್ರೀ ಡಿ. ಹೆಚ್. ರುದ್ರಪ್ಪ.—ಬಾಕಿ ಸೊಸೈಟಿಗಳು ಯಾವುವು ?

ಶ್ರೀ ಕಡಿದಾಳ್ ಮಂಜಪ್ಪ.—ಶಿವಾಜಿ ಕೋ-ಆಪರೇಟಿವ್ ಸೊಸೈಟಿ ಹರಿಜನರ ಮತ್ತು ಬೋಯಿ ಕೋ-ಆಪರೇಟಿವ್ ಸೊಸೈಟಿ ಮತ್ತು ಬ್ರೆದರನ್ ಕೋ-ಆಪರೇಟಿವ್ ಸೊಸೈಟಿ.

Sri C. J. MUCKANNAPPA.—Will Government consider granting of land to Sisters' Co-operative Society ?

Mr. SPEAKER.—There is no Sisters' Co-operative Society.

ಶ್ರೀ ಡಿ. ಹೆಚ್. ರುದ್ರಪ್ಪ.—ಶಿವಾಜಿ ಕೋ-ಆಪರೇಟಿವ್ ಸೊಸೈಟಿಗಾಗಿ ಈ ತಾಲ್ಲೂಕಿನಲ್ಲಿ ಸುಮಾರು ಎರಡು ಸಾವಿರ ಎಕರೆಗಳಷ್ಟು ಜಮೀನಿದ್ದರೂ ಕೊಡದೇ ಇರಲು ಕಾರಣವೇನು ?

Sri KADIDAL MANJAPPA.—Harijans and Bovies are requesting Government to allot them land. Their request for registration has been turned down by the Registrar of Co-operative Societies on the ground that there is already a society formed. The Hon'ble Member Sri Rudrappa and the Deputy Commissioner had gone to this part on 14th June 1961 and they are trying to bring about an amicable understanding between Harijans and the other persons.

ಶ್ರೀ ಡಿ. ಹೆಚ್. ರುದ್ರಪ್ಪ.—ಬೋಯಿ ಕೋ-ಆಪರೇಟಿವ್ ಸೊಸೈಟಿ ಇನ್ನೂ ರಿಜಿಸ್ಟರು ಆಗಿಲ್ಲ ವೆಂದ್ದರಿಂದ ಶಿವಾಜಿ ಕೋ-ಆಪರೇಟಿವ್ ಸೊಸೈಟಿಯವರಿಗೆ ಏಕೆ ಕೊಡಲು ನಿಧಾನವಾಗುತ್ತಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಂದಲೂ ಅರ್ಜಿ ಬಂದಿದೆ. ಅವರನ್ನೂ ಸೇರಿಸಿಕೊಂಡು ಕೊಡುವುದಕ್ಕೆ ತಾವು ಪ್ರಯತ್ನಮಾಡಬೇಕು ಎನ್ನುವ ಸೂಚನೆಯೂ ಇದೆ.

ಶ್ರೀ ಡಿ. ಹೆಚ್. ರುದ್ರಪ್ಪ.—1962ನೇ ಇಸವಿಯೊಳಗಾದರೂ ಇವರಿಗೆ ಜಮೀನನ್ನು ಕೊಡಲಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಈ ತಾಲ್ಲೂಕಿನಲ್ಲಿ 17,000 ಎಕರೆಯಷ್ಟು ಜಮೀನು ಇದ್ದುದರಲ್ಲಿ ಈಗಾಗಲೇ 10,000 ಎಕರೆಗಳಷ್ಟು ಖರ್ಚಾಗಿದೆ. ಇನ್ನೂ ಸ್ವಲ್ಪ ಇದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸರಕಾರದವರು ಕೊಡುತ್ತಿರುವ ಜಮೀನು ಸರಿಯಾಗಿ ಉಪಯೋಗವಾಗುತ್ತಿದೆಯೇ ಇಲ್ಲವೇ, ಎನ್ನುವುದಕ್ಕೆ ಆಯಾ ತಾಲ್ಲೂಕಿಗೆ ಯಾವುದಾದರೂ ಪ್ಲಾನು ಪ್ರೋಗ್ರಾಂ ಇದೆಯೇ ಮತ್ತು ಸರಕಾರದಿಂದ ತೆಗೆದುಕೊಳ್ಳುವ ಹಣ ನ್ಯಾಯವಾಗಿ ಉಪಯೋಗವಾಗುತ್ತಿದೆಯೇ ಇಲ್ಲವೇ ಎನ್ನುವುದನ್ನೇನಾದರೂ ಪರಿಶೀಲನೆ ಮಾಡುತ್ತಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಇರುವುದು ಭೂಮಿಯನ್ನು ಕೊಡುವ ವಿಚಾರ.

CONSTRUCTION OF NEW BUILDING FOR BOYS' PRIMARY SCHOOL AT BIRUR.

*Q.—383. Sri D. H. RUDRAPPA (Birur).—

Will the Government be pleased to state :—

(*a*) whether it is a fact that the Government Boys Primary School Building at Birur was inspected by the Deputy Minister for Education, and if so, what was the opinion of the Government in constructing the new building for Boys School considering the dangerous position of the building ;

(*b*) whether it has come to the notice of the Government that children are put to inconvenience for want of accommodation in the school for the last two years ;

(*c*) whether any plan and estimate are prepared for the above building, and if so, the reasons for the delay in sanctioning the estimates ?

A.—Sri ANNARAO GANAMUKHI (Minister for Education).—

(*a*) Yes, there is need for a new building.

(*b*) Yes.

(*c*) Yes. The matter is under consideration.

ಶ್ರೀ ಡಿ. ಹೆಚ್. ರುದ್ರಪ್ಪ.—ಡೆಪ್ಯುಟಿ ಮಿನಿಸ್ಟರವರು ಇನ್ಸ್‌ಪೆಕ್ಷನ್ನು ಮಾಡಿಕೊಂಡು ಬಂದು ಎರಡು ವರ್ಷಗಳಾದರೂ ಈ ಪ್ರೈಮರಿ ಶಾಲೆಗೆ ಹೊಸ ಕಟ್ಟಡವಾಗುವ ಅಂದಾಜು ಏಕೆ ಇನ್ನೂ ಮಂಜೂರಾಗಿಲ್ಲ.

†ಶ್ರೀ ಅಣ್ಣಾರಾವ್ ಗಣಮುಖಿ.—ಡಿ. ಪಿ. ಐ.ರವರು ಎಸ್ಟಿಮೇಟು ಮಾಡಿ ಸರಕಾರಕ್ಕೆ ಕಳುಹಿಸಿದ್ದಾರೆ. ಅದು ಸರಕಾರದ ಪರಿಶೀಲನೆಯಲ್ಲಿದೆ.

Sri D. H. RUDRAPPA.—What is the total estimate ?

Sri ANNARAO GANAMUKHI.—Rs. 38,000 for 10 rooms.

PROPER REPRESENTATION IN GOVERNMENT SERVICE TO THE APPLICANTS FROM RURAL PARTS.

*Q.—738. Sri B. S. SHANKARAPPA (Hosadurga).—

Will the Governmeut be pleased to state :—

(*a*) whether it is not a fact that the Public Service Commission, while selecting the applicants for appointment, are not giving proper representation to the applicants from rural parts compared to urban area ;

(*b*) whether they will direct the Public Service Commission to give proper representation both to rural and urban areas in recruitment to Government services and that on the basis of the population or on the applications received from both the areas ?